ದಿನಾಂಕಃ 02-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ಎದುರುದಾರ ಪರ ಶ್ರೀ ವಿವಿಟಿ ವಕೀಲರಿಂದ:**

ಮೃತ ನನ್ನ ಮಗ ದಾನೇಶ 8 ನೇ ತರಗತಿವರೆಗೆ ಅಭ್ಯಾಸ ಮಾಡಿದ್ದನು. ಅಪಘಾತದ ಸಮಯದಲ್ಲಿ ನನ್ನ ಮಗನ ವಯಸ್ಸು 19 ವರ್ಷ ಇತ್ತು ಎಂದು ತೋರಿಸಲು ಆಧಾರ ಕಾರ್ಡ ಹಾಜರಪಡಿಸಿರುತ್ತೇನೆ. ಆಧಾರ ಕಾರ್ಡನ ಪ್ರಕಾರ ನನ್ನ ಮಗನ ವಯಸ್ಸು 19 ವರ್ಷ ಇತ್ತು. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಕಡಿಮೆ ವಯಸ್ಸು ಪ್ರಕರದಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಒಟ್ಟು ಇಬ್ಬರು ಗಂಡು ಮಕ್ಕಳು. ಅವರೆಂದರೆ ಮೃತ ದಾನೇಶ ಮತ್ತು ಈ ಪ್ರಕರಣದ 1 ನೇ ಎದುರುದಾರ. 1 ನೇ ಎದುರುದಾರ ನನ್ನ ಮಗ ಎಂದು ಅರ್ಜಿಯಲ್ಲಿ ಹೇಳಿಲ್ಲ ಎಂದರೆ ಸರಿ. ದೂರನ್ನು 1 ನೇ ಎದುರುದಾರ ಕೊಟ್ಟಿರುತ್ತಾನೆ ಎಂದರೆ ಸರಿ. ಪ್ರಕರಣದಲ್ಲಿ ಹಾಜರಪಡಿಸಿದ ಪೋಲಿಸ ದಾಖಲೆಗಳು ಸರಿಯಾಗಿ ಇರುತ್ತವೆ. ಪೋಲಿಸರು ನನ್ನ ಇಬ್ಬರು ಮಕ್ಕಳ ಮೇಲೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಆ ದಿನ ಮೃತ ನನ್ನ ಮಗ ಚಾಲನಾ ಪರವಾನಿಗೆ ಹೊಂದಿರಲಿಲ್ಲ, ಆದರೆ 1 ನೇ ಎದುರುದಾರ ಹೊಂದಿದ್ದ. ಮೃತ ದಾನೇಶ ಇವರು ಚಾಲನಾ ಪರವಾನಿಗೆ ಹೊಂದಿರಲಿಲ್ಲ ಎಂದು 1 ನೇ ಎದುರುದಾರ ಪೋಲಿಸರ ಸಮಕ್ಷಮ ಹೇಳಿಕೆ ನೀಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆ ದಿನ ನನ್ನ ಮಗ ಚಲಾಯಿಸಿದ ಮೋಟರ ಸೈಕಲ್ ನಂ.ಕೆಎ-48/ಇ-7260 ರ ನೋಂದಣಿ ಸಮಯ ಮುಗಿದಿತ್ತು ಎಂದರೆ ನನಗೆ ಗೊತ್ತಿಲ್ಲ. ವಿಮಾ ಕಂಪನಿಯ ನಿಯಮಗಳನ್ನು ಪಾಲನೆ ಮಾಡದೇ ಇರುವುದರಿಂದ ವಿಮಾ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಕಂಡಿಕೆ 5 ರಲ್ಲಿ ಎದುರುನಿಂದ ಬಂದ ಮೋಟರ ಸೈಕಲ್ ನಂ.ಕೆಎ-48/ವಿ-4886 ರ ಸವಾರನ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಿರುತ್ತೇನೆ. ಸದರಿ ಚಾಲಕನು ಮಧ್ಯಪಾನ ಮಾಡಿ ಮೋಟರ ಸೈಕಲ್ ಚಾಲನಾ ಪರವಾನಿಗೆ ಇಲ್ಲದೆ ಚಲಾಯಿಸಿದ್ದನು ಎಂದು ದೋಷರೋಪಣ ಪತ್ರ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ಎರಡು ಮೋಟರ ಸೈಕಲ್ ಗಳ ಎದುರು ಬದುರು ರಸ್ತೆಯ ಮಧ್ಯ ಭಾಗದಲ್ಲಿ ಆಗಿರುತ್ತದೆ ಎಂದರೆ ಸರಿ.

ಅಪಘಾತದ ಸಮಯದಲ್ಲಿ ನನ್ನ ಮಗ ಜಮೀನುಗಳಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಎಂದು ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ತಿಂಗಳಿಗೆ 30 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿರುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ಮೃತ ನನ್ನ ಮಗನ ಆದಾಯದಿಂದ ನಾವೆಲ್ಲರೂ ಉಪ ಜೀವನ ಮಾಡುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗ 1 ನೇ ಎದುರುದಾರ ಕೂಡಿಯೇ ವಾಸ ಇರುತ್ತೇವೆ ಎಂದರೆ ಸರಿಯಲ್ಲ. 1 ನೇ ಎದುರುದಾರ ಬೇರೆ ವಾಸ ಇರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು 2 ನೇ ಎದುರುದಾರನ ತಪ್ಪಿನಿಂದ ಆಗಿರುತ್ತದೆ, ಕಾರಣ 4 ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ನನ್ನ ಮಗ ಮೋಟರ ಸೈಕಲ್ ಸವಾರ ಮತ್ತು ಹಿಂಬದಿ ಸವಾರನ ವಿಮಾ ಕಂತನ್ನು ತುಂಬದೆ ಇರುವುದರಿಂದ 4 ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.07.02 17:35:58 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ